ಸಂಖ್ಯೆ: ಮಮಅಇ/ಮಕ-16/2016-17

ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
1ನೇ ಮಹಡಿ ಬಹುಮಹಡಿ ಕಟ್ಟಡ,
ಬೆಂಗಳೂರು,
ದೂರವಾಣಿ ಸಂಖ್ಯೆ:080 22355984
ದಿನಾಂಕ: 26.07.2016.

ಉಪನಿರ್ದೇಶಕರು ... 2276 ದಿ:01/08/16

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ :-2016-17ನೇ ಸಾಲಿಗೆ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಮಮಇ 83 ಮಮಅ 2006(2) ದಿನಾಂಕ:28.07.2006.

* * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2006-07ನೇ ಸಾಲಿನಿಂದ 6 ರಿಂದ 15 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಇತರರ ಪ್ರಾಣ ರಕ್ಷಣೆಗಾಗಿ ಅಸಾಧಾರಣ ಧೈರ್ಯ-ಸಾಹಸ ಪ್ರದರ್ಶಿಸಿದ ಬಾಲಕರಿಗೆ "ಹೊಯ್ಸಳ" ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಪ್ರಶಸ್ತಿಯನ್ನು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ಉಲ್ಲೇಖಿತ ಆದೇಶದಲ್ಲಿ ನೀಡಲಾಗಿರುತ್ತದೆ. ಆದೇಶದ ಪ್ರತಿಯನ್ನು ಲಗತ್ತಿಸಿದೆ. ಪ್ರಕರಣವು ಆಗಸ್ಟ್ 2015ರಿಂದ ಜುಲೈ 2016ರ ಒಳಗೆ ನಡೆದಿರಬೇಕು.

ಈ ಹಿನ್ನೆಲೆಯಲ್ಲಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡುವುದರ ಜೊತೆಗೆ ಕೆಳಕಂಡ ಇಲಾಖೆಗಳ ಅಧಿಕಾರಿಗಳಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ ಖುದ್ದಾಗಿ ಪತ್ರಗಳನ್ನು ಬರೆದು ಪ್ರಶಸ್ತಿಗೆ ಹೆಚ್ಚಿನ ಅರ್ಜಿಗಳು ಸ್ವೀಕೃತಗೊಳ್ಳುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಂಡು ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು.

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,
2. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ,
3. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
5. ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ

ಆದುದರಿಂದ ತಮ್ಮ ಹಂತದಲ್ಲಿ ಪ್ರಕಟಣೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಸ್ವೀಕರಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ಮಾರ್ಗಸೂಚಿಗಳಡಿ ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮುಂದೆ ಇಟ್ಟು, ಅನುಮೋದನೆಗೊಂಡ ಪ್ರಸ್ತಾವನೆಗಳನ್ನು ನಡವಳಿಯೊಂದಿಗೆ ದಿನಾಂಕ:15.09.2016ರೊಳಗಾಗಿ ಪ್ರಧಾನ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ. ಒಂದು ವೇಳೆ ಅರ್ಹ ಮಕ್ಕಳು ಸದರಿ ಪ್ರಶಸ್ತಿಗಳಿಂದ ವಂಚಿತರಾದಲ್ಲಿ ಇದಕ್ಕೆ ಸಂಬಂಧಿಸಿದ ಉಪ ನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಅರ್ಜಿ ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

**ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ**

ನಿರ್ದೇಶಕರ ಪರವಾಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.

D/desktop/Thimmaiah/award/award letter

(5)

## ನಮೂನೆ-1

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,

## ಬಾಲಕರಿಗಾಗಿ "ಹೊಯ್ಸಳ" ಮತ್ತು ಬಾಲಕಿಯರಿಗಾಗಿ "ಕೆಳದಿ ಚೆನ್ನಮ್ಮ" ಧೈರ್ಯ ಸಾಹಸ ಪ್ರಶಸ್ತಿಗಾಗಿ ಅರ್ಜಿ

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ಜನ್ಮ ದಿನಾಂಕ:ವಯಸ್ಸು: (ಗ್ರಾಮ ಪಂಚಾಯತಿ ಮಟ್ಟದಲ್ಲಿ ತಾಲ್ಲೂಕು ತಹಶೀಲ್ದಾರ ಹಾಗೂ ನಗರಗಳಲ್ಲಿ/ಮಹಾನಗರ ಪಾಲಿಕೆಯವರಿಂದ ದೃಢೀಕರಣ ಪಡೆದಿರಬೇಕು) | |
| 3 | ಲಿಂಗ: | |
| 4 | ತಾಯಿ: ತಂದೆ: ಪೋಷಕರ ಹೆಸರು | |
| 5 | ವಿಳಾಸ | |
| 6 | ವಿದ್ಯಾಭ್ಯಾಸ ಮಾಡುತ್ತಿರುವ ತರಗತಿ | |
| 7 | ಓದುತ್ತಿರುವ ಶಾಲಾ ವಿಳಾಸ | |
| 8 | ಘಟನೆ ನಡೆದ ಸ್ಥಳ | |
| 9 | ಘಟನೆಯ ಸ್ವರೂಪ (ಪ್ರಕರಣದ ವಾಸ್ತವ ಸ್ಥಿತಿ/ ಸಾಧಿಸಿದ ಶೌರ್ಯ) | |
| 10 | ಅಪಾಯದಿಂದ ಪಾರುಗೊಳಿಸಿದ ವ್ಯಕ್ತಿಯೊಡನೆ ಸಂಬಂಧ | |
| 11 | ಒದಗಿಸಬೇಕಾದ ದಾಖಲೆಗಳು:<br>1) ಪ್ರಥಮ ವರ್ತಮಾನ ವರದಿ ಪ್ರತಿ<br>2) ಪತ್ರಿಕಾ ಪ್ರಕಟಣೆ ನೀಡಿರುವ ವರದಿ<br>3) ಮಗುವಿನ 2 ಭಾವ ಚಿತ್ರ<br>4) ಘಟನೆಯ ವಿವರವಾದ ವರದಿ<br><br>(ಅರ್ಜಿಯನ್ನು ಈ ಕೆಳಕಂಡ 2 ಅಂಗೀಕೃತ ಪ್ರಾಧಿಕಾರದಿಂದ ಶಿಫಾರಸ್ಸಿನೊಂದಿಗೆ ದೃಢೀಕರಿಸಿ ಸಲ್ಲಿಸುವುದು)<br>ಅಂಗೀಕೃತ ಪ್ರಾಧಿಕಾರ: ಡಿಸ್ಟ್ರಿಕ್ಟ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್‌ಫೇರ್/ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು/ ಜಿಲ್ಲಾ ಪಂಚಾಯತ್ ಮುಖ್ಯಸ್ಥರು/ ಶಾಲಾ ಮುಖ್ಯಸ್ಥರು/ ಪ್ರಾಂಶುಪಾಲರು | |
| 12 | ಕುಟುಂಬದ ವಿವರ<br>1) ಕುಟುಂಬದಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ<br>2) ಕುಟುಂಬದ ಒಟ್ಟು ಆದಾಯ<br>3) ತಂದೆ:ತಾಯಿ | |
| 13 | ಇದೇ ಸಾಹಸದ ಸಂಬಂಧ ಇನ್ನಾವುದಾದರೂ ಪ್ರಶಸ್ತಿ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ವಿವರ ನೀಡುವುದು. | |

ಸ್ಥಳ: ಅರ್ಜಿದಾರರ ಸಹಿ

ದಿನಾಂಕ:

(ಮಗುವಿನ ತಾಯಿ : ತಂದೆ : ಪೋಷಕರ ಸಹಿ)

# ಮುಚ್ಚಳಿಕೆ

ಶಿಫಾರಸ್ಸು ಮಾಡುವ ಪ್ರಾಧಿಕಾರ ಭರ್ತಿ ಮಾಡತಕ್ಕದ್ದು

ಎ)ಮಾಸ್ಟರ್/ಕುಮಾರಿ.____________________ತಂದೆ________________________________
ಇವರು ಸಲ್ಲಿಸಿರುವ ಅರ್ಜಿಯಲ್ಲಿನ ವಿವರಗಳು ನಡೆದ ಘಟನೆಗೆ ಸತ್ಯವಾಗಿದ್ದು, ಪ್ರಶಸ್ತಿಗೆ ಯೋಗ್ಯವಿದೆ ಎಂದು ಪ್ರಮಾಣೀಕರಿಸುತ್ತೇನೆ.

ಬಿ) ಮಾಸ್ಟರ್/ಕುಮಾರಿ________________________________________________________
ರವರು ಸಾಧಿಸಿರುವ ಪ್ರಕರಣದ ಶೌರ್ಯ ಈ ಪ್ರಶಸ್ತಿಗಾಗಿ ಗುರುತಿಸಲು ಯೋಗ್ಯವಾಗಿದೆ.

ಹೆಸರು, ಪದನಾಮ ಮತ್ತು
ವಿಳಾಸ
ದೂರವಾಣಿ ಸಂಖ್ಯೆ :

ಶಿಫಾರಸ್ಸು ಮಾಡುವ ಪ್ರಾಧಿಕಾರದ ಸಹಿ
ಮೊಹರಿನೊಂದಿಗೆ,